ಅದು ಮುಗಿದು ಹೋಗಿತ್ತು, ಸೀದಾ ಮನೆಗೆ ಮಾರ್ಕ್ಸ್ ಕಾರ್ಡ್ ಮತ್ತು ಸರ್ಟಿಫಿಕೇಟ್ ಬಂದು ಬಿದ್ದಿದ್ದವು.

ಮೂರು ಬೆಡ್ ರೂಮ್ ಫ್ಲಾಟ್, ಹೊಂಡಾ ಕಾರ್‌ಗಳನ್ನೂ ಕೊಂಡ ಮೇಲೆ 'ಇನ್ನೇನು ಮಾಡೋಕ್ಕಿದೆ ಲೈಫಲ್ಲಿ?' ಅಂತ ಒಂಥರಾ ಖಾಲಿ ಖಾಲಿ ಅನ್ನಿಸಿತ್ತು. ಹಾಗಂತ್ಲೇ ಅವನ ಫಾರಿನ್ ಹುಚ್ಚಿಗೆ ಪುಕ್ಕ ಹುಟ್ಟಿತೋ ಏನೋ? ಇನ್ನೂ ಬೇಕೆಂಬ ಹಪಾಹಪಿ; ಅದೇನೆಂದು ಅವನಿಗೇ ಗೊತ್ತಿಲ್ಲ!

ಈ ಬಾರಿಯೂ ಕಂಪನಿಯ ಓವರ್‌ಸೀಸ್ ಪ್ರಾಜೆಕ್ಟಿಗೆ ಮತ್ತಾರೋ ಸೆಲೆಕ್ಟ್ ಆಗಿದ್ದರು. ಅವಿನಾಶನಿಗೆ ತಲೆ ಪೂರ್ತಿ ಕೆಟ್ಟು ಹೋಗಿ ಆವೇಶದಿಂದ 'ಈ ಕಂಪನಿಯ ಉಸಾಬರೀನೇ ಬ್ಯಾಡ' ಅಂತ ಗೆಳೆಯರ ಮುಂದೆ ಚೀರಾಡಿ ಹಿಂದೆ ಮುಂದೆ ಯೋಚಿಸದೆ ರಾಜೀನಾಮೆ ಚೆಲ್ಲಿ ಮನೆಗೆ ಬಂದಿದ್ದ. ತಿಂಗಳ ನೋಟಿಸ್ ಪಿರಿಯಡ್ಡಿಗೆ ರಜಾ ಗೀಚಿದ್ದ. 'ಹೇ ಹೀಗ್ಯಾಕೆ ಇಂಥಾ ಡ್ರ್ಯಾಸ್ಟಿಕ್ ಡಿಸಿಶನ್?' ಅಂತ ದೇಶಾವರಿ ಮಾತಾಡಿದ ಅವನ ಗ್ರೂಪ್ ಹೆಡ್ ಗುಪ್ತಾ, ಎಲ್ಲಿ ಇವ ರಾಜೀನಾಮೆ ಹಿಂತೆಗೆದುಕೊಂಡಾನೋ ಎಂಬಂತೆ ಲಗುಬಗೆಯಿಂದ ಮಂಜೂರು ಮಾಡಿ ಕೊಟ್ಟಾಗ ಪಿಚ್ಚೆನಿಸಿತ್ತು. ರಾತ್ರಿಯೆಲ್ಲ ನಿದ್ರೆ ಬರದೇ ಹೊರಳಾಡುತ್ತಾ ನಡುನಡುವೆ ಗೊರಕೆ ಹೊಡೆಯುತ್ತಿದ್ದ ಮಧುವನ್ನೇ ನೋಡುತ್ತ ಬಿದ್ದುಕೊಂಡ. ಮುಂಜಾನೆಯ ಹೊತ್ತಿಗೆಂದರೆ ತುಸು ಜೊಂಪು ಬಂದಿತ್ತು. ಏನೋ ಕನಸು; ಧಢ್ಡನೆ ಎಚ್ಚರವಾಯ್ತು.

'ಮಧು, ನಾ ಪಿಎಚ್‌ಡಿಗೆ ಅಪ್ಲೈ ಮಾಡುವವನಿದ್ದೇನೆ. ನನ್ನ ಕ್ವಾಲಿಫಿಕೇಶನ್‌ಗೆ ಯಾರಾದ್ರೂ ಕರೆದು ಸೀಟ್ ಕೊಡ್ತಾರೆ. ಟೆಕ್ಸಾಸ್ ಎ ಎಂಡ್ ಎಮ್ ಮತ್ತು ಯುನಿವರ್ಸಿಟಿ ಆಫ್ ಆರಿಝೋನಾದಿಂದ ಈಗಾಗಲೇ ಒಪ್ಪಿಗೆ ಬಂದದ. ನೀ ಅಂತೂ ಸಪೋರ್ಟ ಮಾಡೇ ಮಾಡ್ತಿ, ಹೌದಿಲ್ಲೋ' ಅಂತ ಹಿನ್ನೆಲೆ ಕೊಡದೆ ಜಡಿಮಳೆಯಂತೆ ನಿನ್ನೆ ರಾತ್ರಿ ಸುರಿದಿದ್ದು ಈಗ ನೆನಪಾಯ್ತು.

'ನನ್ನನ್ನು ಒಂದು ಮಾತು ಕೇಳಬೇಕು ಅನ್ನಿಸಲಿಲ್ಲ ನಿನಗೆ, ಎಂಥಾ ಬೇಜವಾಬ್ದಾರಿ ನಿಂದು ಅವಿ...' ಅಂತೆಲ್ಲ ಒಳಗಿನಿಂದ ಉಕ್ಕುಕ್ಕಿ ಬರುತ್ತಿದ್ದರೂ ಮಧು ಮೇಲೆ ಮಾತ್ರ 'ಆಫ್ ಕೋರ್ಸ' ಅನ್ನುತ್ತಾ ನಕ್ಕಿದ್ದಳು. ಗಂಡನಿಗೇನು ಬೇಕೋ ಅದನ್ನೇ ಮಾತಾಡೋದು ಅವಳು ಲಗ್ನವಾಗಿ ಐದು ವರ್ಷಗಳಿಂದ ಮಾಡಿಕೊಂಡು ಬಂದ ರೂಢಿ. ಸುಮ್ಮ ಸುಮ್ಮನೆ ವಾದಕ್ಕೆ ಪ್ರತಿವಾದ ಮಾಡ್ತಾ ಬರೀ ಮಾತಲ್ಲೇ ಗೆಲ್ಲುವ ಚಾಳಿಯವಳಲ್ಲ ಅವಳು. ಹೂಂಗುಟ್ತಾನೇ 'ನಾ ಹೀಗೆಂದರೆ ಅದರ ಪರಿಣಾಮ ಏನಾಗುತ್ತೆ? ಯಾವ ಮಾತು ಈಗಲೇ ಹೇಳಬೇಕು? ಯಾವ್ದನ್ನು ಆಮೇಲೆ ಹೇಳ್ಬೇಕು?' ಅಂತೆಲ್ಲ ಗುಣಾಕಾರ ಭಾಗಾಕಾರ ಮಾಡ್ತಾನೇ ಇರ್ತಾಳೆ, ನಡುನಡುವೆ ಅವನ ಮಾತಿಗೆ ನಿರೀಕ್ಷಿತ ಕಮೆಂಟು ಕೊಡೋದನ್ನು ಮಾತ್ರ ಬಿಡೋದಿಲ್ಲ.

ಕೂದಲು ಕೆದರಿಕೊಂಡು ಬನಿಯನ್ ಇಲ್ಲದ ಸಪಾಟು ಎದೆಯಲ್ಲಿ ಕಿಚನ್ ಕೌಂಟರ್ ಮುಂದೆ ನಿಂತ ಗಂಡನನ್ನೇ ದಿಟ್ಟಿಸುತ್ತಿದ್ದರೂ ಮನದಲ್ಲಿ ಹತ್ತಾರು ವಿಚಾರಗಳು ತೂಗುತ್ತಿದ್ದವು; 'ಇವ ಅಲ್ಲಿ ಸ್ಟೂಡೆಂಟ್ ಅಕಾಮಡೇಶನ್ ಒಳಗಿರೋಂವ, ಭಾಳಂದ್ರ ಸಾವಿರ ದೀಡ ಸಾವಿರ ಡಾಲರ್ ಸ್ಟುಡೆಂಟ್‌ಶಿಪ್ ಸಿಕ್ಕೀತು. ಕಾಫಿಪಾಸ್, ಬಸ್ ಪಾಸ್ ಅಂತೆಲ್ಲ ಮಾಡಿಕೊಂಡು ಒಂದು ಖೋಲಿಯ ಮನ್ಯಾಗ ಕಮ್ಮಿ ಖರ್ಚಿನಾಗ ಇರಬೇಕು. ನಾ ಹ್ಯಾಂಗ ಇರಲಿ? ನಾ ಇವನ ಜೋಡಿಗೆ ಅಲ್ಲಿಗೆ ಹೋಗದಿದ್ದರೆ ಏನಾಗ್ತದ? ಭಾಳೆಂದರೆ.... ಎನ್‌ಆರ್‌ಐ ಆಗಿ ಗೆಳತಿಯರಿಗೆ ಹೊಟ್ಟೆಕಿಚ್ಚು ಮಾಡೋ ಚಾನ್ಸು ತಪ್ಪಬಹುದಷ್ಟೆ,' ಹೀಗೆ ಅರ್ಧ ನಿಮಿಷದಲ್ಲಿ ಅಳೆದು ತೂಗಿ ಕಡೆಗೆ ತಾ ಅಮೆರಿಕೆಗೆ ಹೋಗದಿರೋದೇ ಛಲೋ ಅಂತ ಪಕ್ಕಾ ಮಾಡಿಕೊಂಡ ಮೇಲೆ ಇವನತ್ತ ತಿರುಗಿ ಕಣ್ಣರಳಿಸುತ್ತಾ 'ವಾವ್ ವಂಡರ್ ಫುಲ್ ಅವಿ! ನೀನಂದ್ರೆ ಕೇಳಬೇಕಾ? ಆರತಿ ಮಾಡಿ ಕರಕೋತಾರ ಅಮೆರಿಕೆಯ ಯುನಿವರ್ಸಿಟಿಯವರು' ಅಂತ ನಕ್ಕಳು.

'ಮತ್ತ ನನ್ನ ಸೇವಿಂಗ್ಸ ನೋಡೇನಿ, ಇಪ್ಪತ್ತೈದು ಲಕ್ಷ ಅದ, ಈ ಗುಪ್ತಾ ಏನರೇ ಆಫೀಸ್ ಫಂಡ್ಸ ಕೊಡಲಿಕ್ಕೆ ರಾಗ ಹಾಡಿದನೆಂದರೆ 'ಥೋ ಮಗನೇ ನೀನೂ ಬ್ಯಾಡ ನಿನ್ನ ಫಂಡೂ ಬ್ಯಾಡ' ಅಂತ ಮಾರಿ ಮ್ಯಾಲ ಹೇಳಿ ಹೋಗಂವಿದ್ದೇನಿ' ಹೇಳ್ತಾ ಹೇಳ್ತಾ ಥರಥರ ನಡುಗತೊಡಗಿದ್ದ. ಅವನ ಉದ್ರೇಕ ಕಂಡ ಮಧು ಮತ್ತೊಮ್ಮೆ ಚಹಾ ಮಾಡಲು ಗ್ಯಾಸ್ ಹೊತ್ತಿಸಿದಳು.

'ಮಧು ನೀ ಯಾವಾಗ್ಲೂ 'ನನ್ನ ನೌಕರಿ ಅಂದರೆ ನಿಂಗೆ ದರಕಾರೇ ಇಲ್ಲ', ಅಂತಿದ್ಯಲ್ಲ, ಇನ್ನು ಸ್ವಲ್ಪ ತಿಂಗಳು ನಿನ್ನ 'ಬಚಪನ್ ಸ್ಕೂಲ್' ನೀಡೋ ಪಗಾರದ ಮ್ಯಾಲೇನೇ ನಮ್ಮ ಸಂಸಾರ ನಡೀಬೇಕು ನೋಡು. ನೀನೇ